**A**

**CCE RR/PR/PF/ NSR/NSPR**

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಆಗಸ್ಟ್ 2024 ರ ಪರೀಕ್ಷೆ - 3**

**AUGUST 2024 EXAMINATION - 3**

# ಮಾದರಿ ಉತ್ತರಗಳು

# MODEL ANSWERS

ಸಂಕೇತ ಸಂಖ್ಯೆ : **62-K** CODE NO. : **62-K**

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)

**(Regular Repeater / Private Repeater / Private Fresh / NSR / NSPR)**

ದಿನಾಂಕ : **03. 08. 2024 ]** **[ ಗರಿಷ್ಠ ಅಂಕಗಳು : 80**

**Date : 03. 08. 2024 ]** **[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : | **8 × 1 = 8** |
| 1. | ಕನ್ನಡ ವರ್ಣಮಾಲೆಯಲ್ಲಿರುವ ದೀರ್ಘಸ್ವರಗಳ ಸಂಖ್ಯೆ<br>(ಎ) ೧೦ (ಬಿ) ೦೯<br>(ಸಿ) ೦೭ (ಡಿ) ೦೬<br>*ಉತ್ತರ :* (ಸಿ) ೦೭ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 2. | 'ಕತ್ತಲು' – ಈ ಪದದ ವಿರುದ್ಧಾರ್ಥಕ ಪದ<br>(ಎ) ರಾತ್ರಿ (ಬಿ) ತಮ<br>(ಸಿ) ಆಕಾಶ (ಡಿ) ಬೆಳಕು<br>**ಉತ್ತರ :** (ಡಿ) ಬೆಳಕು | |
| 3. | ಕೆಳಗಿನವುಗಳಲ್ಲಿ ತದ್ಭವ ರೂಪಕ್ಕೆ ಉದಾಹರಣೆಯಾಗಿರುವ ಪದ<br>(ಎ) ವರ್ಷ (ಬಿ) ವರ್ಣ<br>(ಸಿ) ಕಬ್ಬ (ಡಿ) ಸ್ವರ್ಗ<br>**ಉತ್ತರ :** (ಸಿ) ಕಬ್ಬ | |
| 4. | ಕೆಳಗಿನವುಗಳಲ್ಲಿ ಗುಣ ಸಂಧಿಗೆ ಉದಾಹರಣೆಯಾಗಿರುವ ಪದ<br>(ಎ) ಪೂರ್ವೋತ್ತರ (ಬಿ) ದೀಪಾಲಂಕಾರ<br>(ಸಿ) ನೆತ್ತರೊಂದೆ (ಡಿ) ಸದಭಿರುಚಿ<br>**ಉತ್ತರ :** (ಎ) ಪೂರ್ವೋತ್ತರ | |
| 5. | ಒಬ್ಬರು ಹೇಳಿದ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ<br>(ಎ) ಭಾವಸೂಚಕ (ಬಿ) ಆವರಣ<br>(ಸಿ) ವಿವರಣಾತ್ಮಕ (ಡಿ) ಉದ್ಧರಣ<br>**ಉತ್ತರ :** (ಡಿ) ಉದ್ಧರಣ | |
| 6. | ಕೆಳಗಿನವುಗಳಲ್ಲಿ ಇಂಗ್ಲಿಷಿನಿಂದ ಬಂದು ಕನ್ನಡದಲ್ಲಿ ಬಳಕೆಯಾಗುತ್ತಿರುವ ಪದ<br>(ಎ) ಟಿಕೆಟ್ (ಬಿ) ರಸ್ತೆ<br>(ಸಿ) ಕಚೇರಿ (ಡಿ) ಕಾಗದ<br>**ಉತ್ತರ :** (ಎ) ಟಿಕೆಟ್ | |
| 7. | ಬೆಟ್ಟ ಹತ್ತುವಾಗ ಕಲ್ಲುಗುಡ್ಡವಿರುವುದರಿಂದ ದಳದಳ ಬೆವರು ಹರಿಯಿತು.<br>– ಈ ವಾಕ್ಯದಲ್ಲಿರುವ ಅನುಕರಣಾವ್ಯಯ ಪದ<br>(ಎ) ಹರಿಯಿತು (ಬಿ) ಕಲ್ಲುಗುಡ್ಡ<br>(ಸಿ) ದಳದಳ (ಡಿ) ಬೆವರು<br>**ಉತ್ತರ :** (ಸಿ) ದಳದಳ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 8. | ಬುತ್ತಿಯನ್ನು ಕೊಟ್ಟ ಶಿಲ್ಪಿಯ ಮುಖ ಬಿಳಿಚಿತು. – ಈ ವಾಕ್ಯದಲ್ಲಿ ದ್ವಿತೀಯ ವಿಭಕ್ತಿ ಪ್ರತ್ಯಯದಿಂದ ಕೂಡಿರುವ ಪದ<br>(ಎ) ಶಿಲ್ಪಿಯ (ಬಿ) ಬಿಳಿಚಿತು<br>(ಸಿ) ಬುತ್ತಿಯನ್ನು (ಡಿ) ಮುಖ<br>***ಉತ್ತರ :*** (ಸಿ) ಬುತ್ತಿಯನ್ನು | |
| **II.** | **ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **4 × 1 = 4** |
| 9. | ತಿರುಮಲಾಂಬ : ನಂಜನಗೂಡು :: ಆರ್. ಕಲ್ಯಾಣಮ್ಮ : ................ .<br>***ಉತ್ತರ :*** ಬೆಂಗಳೂರು | |
| 10. | ಕುಲಕರ್ಣಿಯ ಕೈಯಲ್ಲಿ : ಪಿಸ್ತೂಲು :: ರಾಮ್‌ಸಿಂಗ್‌ನ ಕೈಯಲ್ಲಿ : ........... .<br>***ಉತ್ತರ :*** ರಾಷ್ಟ್ರಧ್ವಜ | |
| 11. | ನುಚ್ಚುನೂರಾಗುವುದು : ಅಹಂಕಾರ :: ಮುದುಡಿ ಹೋಗುವುದು : ......... .<br>***ಉತ್ತರ :*** ನನ್ನ ಮತಿ | |
| 12. | ಅಪ್ಪರಿಲ್ಲದೆ ಸೊಪ್ಪಾದೊ : ಈ ಭೂಮಿ :: ಸಪ್ಪೆದಂಟಾದೊ : .............. .<br>***ಉತ್ತರ :*** ದನಕರ | |
| **III.** | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | **4 × 1 = 4** |
| 13. | ಸಂನ್ಯಾಸಿ ವೇಷ ಧರಿಸಿದ ಮಲ್ಲಮ್ಮಾಜಿಯ ಸರದಾರ ಯಾರು ?<br>***ಉತ್ತರ :***<br>ಸಂನ್ಯಾಸಿ ವೇಷ ಧರಿಸಿದ ಮಲ್ಲಮ್ಮಾಜಿಯ ಸರದಾರ ಶಾಂತಯ್ಯ. | |
| 14. | ಬಯಲಿಗೆ ಎಲ್ಲಿಂದ ಹೊರ ಬರಬೇಕು ?<br>***ಉತ್ತರ :***<br>ಬಯಲಿಗೆ ಜಾತಿಮತದ ಗುಹೆಗಳಿಂದ ಹೊರ ಬರಬೇಕು. | |
| 15. | ಧರ್ಮಪದನು ಯಾವ ದೇವಾಲಯದ ಮಹಾದ್ವಾರಕ್ಕೆ ಕಲಶವನ್ನು ಕೂಡಿಸಲು ಬಂದನು ?<br>***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಧರ್ಮಪದನು ಕೋನಾರ್ಕ ದೇವಾಲಯದ ಮಹಾದ್ವಾರಕ್ಕೆ ಕಲಶವನ್ನು ಕೂಡಿಸಲು ಬಂದನು. | |
| 16. | ಧರ್ಮಪದನ ತಂದೆಯ ಹೆಸರೇನು ? | |
| | ***ಉತ್ತರ :*** | |
| | ಧರ್ಮಪದನ ತಂದೆಯ ಹೆಸರು ವಿಶು. | |
| **IV.** | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವಿಕೆ.** **(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) :** | **8 × 2 = 16** |
| 17. | ಮಿನಿಪೊಲೀಸ್ ನಗರದ ಪೊಲೀಸರು ಗೊರೂರರನ್ನು ಹೇಗೆ ಉಪಚರಿಸಿದರು ? | |
| | ***ಉತ್ತರ :*** | |
| | ಮಿನಿಪೊಲೀಸ್ ನಗರದ ಟ್ರಾಫಿಕ್ ಪೊಲೀಸನು ಗೊರೂರರನ್ನು ತನ್ನ ಕಾರಿನಲ್ಲಿ ಮನೆಗೆ ಕರೆದುಕೊಂಡು ಹೋದನು. ಅಲ್ಲಿ ಗೊರೂರರಿಗೆ ಬ್ರೆಡ್, ಹಾಲು, ಹಣ್ಣು ಮತ್ತು ಬಿಸ್ಕತ್ತುಗಳನ್ನು ರಾತ್ರಿ ಊಟಕ್ಕೆ ನೀಡಿದನು. ಊಟವಾದ ನಂತರ ಗಾಳಿ ಬೆಳಕು ಬರುವ ಲಾಕಪ್ಪಿನಲ್ಲಿ ಸ್ವಚ್ಛವಾದ ಹಾಸಿಗೆ ನೀಡಿ ಮಲಗಲು ಹೇಳಿ ಉಪಚರಿಸಿದನು. | |
| 18. | ಶರೀಫರು ತಮಗಾದ ದುಃಖವನ್ನು ಕಡಿಮೆ ಮಾಡಿಕೊಂಡ ಬಗೆಯನ್ನು ತಿಳಿಸಿ. | |
| | ***ಉತ್ತರ :*** | |
| | ಶರೀಫರು ಧೃತಿಗೆಡದೆ ತಮಗಾದ ದುಃಖವನ್ನು ಸಾಧು ಸತ್ಪುರುಷರ ಸಹವಾಸದಿಂದ ಕಡಿಮೆ ಮಾಡಿಕೊಳ್ಳತೊಡಗಿದರು. ದೇವರ ಧ್ಯಾನ ಹಾಗೂ ಉಪಾಸನೆಗಳಲ್ಲಿ ತಮ್ಮ ಹೃದಯಕ್ಕಾದ ಪೆಟ್ಟನ್ನು ಮರೆಯಲು ಹವಣಿಸುತ್ತಿದ್ದರು. ಮನೆಯ ಮಗ್ಗುಲಲ್ಲೇ ಒಂದು ಕಟ್ಟೆಯ ಮೇಲೆ ಕುಳಿತು ಅಧ್ಯಾತ್ಮ-ಸುಬೋಧ, ಧರ್ಮ-ನೀತಿ ಮಾತುಗಳನ್ನು ಬೋಧಿಸುವ ಹವ್ಯಾಸದಿಂದ ದುಃಖವನ್ನು ದೂರ ಮಾಡಿಕೊಂಡರು. | |
| 19. | ಪುಸ್ತಕ ಪ್ರಪಂಚವು ನನ್ನ ಆತ್ಮಚರಿತ್ರೆಯಲ್ಲಿ ಅತಿ ಮುಖ್ಯವಾದ ಭಾಗ ಎಂದು ಬೀಚಿಯವರು ಏಕೆ ಹೇಳಿದ್ದಾರೆ ? | |
| | ***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಬೀಚಿ ಪ್ರಪಂಚದ ಬಹುದೊಡ್ಡ ಮತ್ತು ಅತಿ ಮುಖ್ಯವಾದ ಭಾಗವೇ ಪುಸ್ತಕ ಪ್ರಪಂಚ ಪುಸ್ತಕ ಪ್ರಪಂಚವಿಲ್ಲದ ಅವರ ಬದುಕು ಬರಡು. ಸಹರಾ ಮರುಭೂಮಿ. ಇವರ ಜೀವಾಳವೇ ಪುಸ್ತಕವಾಗಿರುವಾಗ ಪುಸ್ತಕವಿಲ್ಲದ ಬೀಚಿ ಜೀವವಿಲ್ಲದ ದೇಹವಿದ್ದಂತೆ ರೆಡಿಮೆಡ್ ಅಂಗಡಿಯ ಮುಂದೆ ಕುಳಿತಿರುವ ಚೆಂದದ ಬೊಂಬೆಯಂತೆ ಹೀಗಾಗಿ ಪುಸ್ತಕ ಪ್ರಪಂಚದವು ಬೀಚಿ ಆತ್ಮಚರಿತ್ರೆಯ ಮುಖ್ಯವಾದ ಭಾಗವಾಗಿತ್ತು. | |
| 20. | 'ವಿಶ್ವಾಮಿತ್ರ ಸೃಷ್ಟಿ' ಬೀಚಿಯವರ ಮೇಲೆ ಬೀರಿದ ಪ್ರಭಾವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>'ವಿಶ್ವಾಮಿತ್ರ ಸೃಷ್ಟಿ' ಬೀಚಿಯವರನ್ನು ಬಹುಬೇಗ ಸೆರೆಹಿಡಿದವು. ಆಚಾರ್ಯರ ಆ ಮಾತಿನ ಚಮತ್ಕಾರ, ವಿಚಾರ ಮಂಡನೆಯ ಕಲಾಕುಶಲತೆಗೆ ಅವರು ಮಾರುಹೋಗಿದ್ದರು. ರಾಯರು ನನ್ನ ಹೃದಯವನ್ನು ಗೆದ್ದರೆ ಆಚಾರ್ಯರು ನನ್ನ ತಲೆಯನ್ನು ಗೆದ್ದರು ಎಂದು ಬೀಚಿ ಹೇಳುವ ಮೂಲಕ 'ವಿಶ್ವಾಮಿತ್ರ ಸೃಷ್ಟಿ' ಬೀರಿದ ಪ್ರಬಾವವನ್ನು ವಿವಸಿದ್ದಾರೆ. | |
| 21. | ಸಿ.ಪಿ.ಕೆ.ಯವರು 'ಹಿರಿಬಾಳುಗಳ ಪಳೆಯುಳಿಕೆ' ಎಂದು ಯಾವುದನ್ನು ಕರೆದಿದ್ದಾರೆ ? ಏಕೆ ?<br>***ಉತ್ತರ :***<br>ಸಿ.ಪಿ.ಕೆ.ಯವರು ಗ್ರಂಥಾಲಯವನ್ನು 'ಹಿರಿಬಾಳುಗಳ ಪಳೆಯುಳಿಕೆ' ಎಂದು ಕರೆದಿದ್ದಾರೆ ಗ್ರಂಥರಾಶಿಗಳಿರುವ ಗ್ರಂಥಾಲಯಕ್ಕೆ ಹೋದಾಗ ಅವರ ಮತಿ ಮುದುಡಿ ಹೋಗಿ ಅಹಂಕಾರ ನುಚ್ಚುನೂರಾಗುತ್ತದೆ. ತಾನು ಪುಸ್ತಕಗಳ ಕೆಳಗಿರುವ ದೂಳ ಕಣದಂತೆ ಅಲ್ಪ ಎಂಬ ಭಾವನೆ ಮೂಡಿ ಅಲ್ಲಿಂದ ಓಡಿಹೋಗಬೇಕೆನಿಸುತ್ತದೆ. ಏಕೆಂದರೆ ಆ ಗ್ರಂಥರಾಶಿಗಳು ದೊಡ್ಡ ದೊಡ್ಡ ಸಾಧಕರ, ಮಹಾನು ವ್ಯಕ್ತಿಗಳ ಸಾಧನೆಗಳ ಅವಶೇಷಗಳಾಗಿವೆ. ಹಾಗಾಗಿ ಸಿ.ಪಿ.ಕೆ.ಯವರು ಗ್ರಂಥಾಲಯವನ್ನು ಹಿರಿಬಾಳುಗಳ ಪಳೆಯುಳಿಕೆ ಎಂದು ಕರೆದಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 22. | ದೇವರನ್ನು ಒಲಿಸಿಕೊಳ್ಳುವ ಪರಿಯನ್ನು ಬಸವಣ್ಣನವರು ಹೇಗೆ ತಿಳಿಸಿದ್ದಾರೆ ?<br>***ಉತ್ತರ :***<br>ಕಳ್ಳತನ, ಕೊಲೆಯನ್ನು ಮಾಡಬಾರದು, ಸುಳ್ಳನ್ನು ಹೇಳಬಾರದು. ಕೋಪಮಾಡಿಕೊಳ್ಳಬಾರದು. ಬೇರೆಯವರನ್ನು ಕಂಡು ಅಸಹ್ಯಪಡಬಾರದು. ನಮ್ಮನ್ನು ನಾವು ಹೊಗಳಿಕೊಳ್ಳಬಾರದು. ಬೇರೆಯವರನ್ನು ನಿಂದಿಸಬಾರದು. ಈ ರೀತಿಯ ಅಂತರಂಗ-ಬಹಿರಂಗ ಶುದ್ಧಿಯಂತಹ ಕೆಲಸಕಾರ್ಯಗಳಿಂದ ದೇವರನ್ನು ಸುಲಭವಾಗಿ ಒಲಿಸಿಕೊಳ್ಳಬಹುದೆಂದು ಬಸವಣ್ಣನವರು ತಿಳಿಸಿದ್ದಾರೆ. | |
| 23. | ಸ್ವರ್ಗ-ನರಕಗಳ ಬಗೆಗೆ ಬಸವಣ್ಣನವರು ಕೊಟ್ಟ ಹೊಸ ಸೂತ್ರವನ್ನು ತಿಳಿಸಿ.<br>***ಉತ್ತರ :***<br>ದೇವಲೋಕ, ಮರ್ತ್ಯಲೋಕ ಬೇರೆಬೇರೆ ಇಲ್ಲವೆಂದು ಬಸವಣ್ಣನವರು ಹೇಳಿದ್ದಾರೆ. ಸತ್ಯವನ್ನು ನುಡಿಯುವುದನ್ನು ದೇವಲೋಕವೆಂತಲೂ, ಸುಳ್ಳನ್ನು ನುಡಿಯುವುದನ್ನು ಮರ್ತ್ಯಲೋಕವೆಂದು ಅವರು ಕರೆದಿದ್ದಾರೆ. ಒಳ್ಳೆಯ ನಡವಳಿಕೆಗಳಿಂದ ಸ್ವರ್ಗ ಪ್ರಾಪ್ತಿಯಾಗುತ್ತದೆ. ಕೆಟ್ಟ ನಡವಳಿಕೆಯಿಂದ ನರಕ ಲಭಿಸುತ್ತದೆ. ಈ ರೀತಿ ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂಬ ಹೊಸ ಸೂತ್ರವನ್ನು ಬಸವಣ್ಣನವರು ನೀಡಿದ್ದಾರೆ. | |
| 24. | ಪುಲಿಗೆರೆ ಸೋಮನಾಥನು ಹೇಳಿರುವಂತೆ ಸಾಮರ್ಥ್ಯದಿಂದ ಮಾಡಬಹುದಾದ ಕಾರ್ಯಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ಯುದ್ಧ ಮಾಡಬಲ್ಲವನು ಭಟನಾಗಬೇಕು. ನಾನಾ ವಿಧದ ಚಮತ್ಕಾರಗಳನ್ನು ತಿಳಿದವನು ಮಂತ್ರಿಯಾಗಬೇಕು. ಕೋಪಿಸಿಕೊಳ್ಳದೆ ತಾಳ್ಮೆಯಿಂದ ಇರುವವನು ದೊರೆಯಾಗಬೇಕು. ಕಾಮ ಕ್ರೋಧ ಮುಂತಾದ ಅರಿಷಡ್ವರ್ಗಗಳನ್ನು ಗೆಲ್ಲುವವನು ಯೋಗಿಯಾಗಬೇಕು. ತನ್ನ ಕೈಯಿಂದ ದಂಡತೆರುವ ಶಕ್ತಿಯಿರುವವನು ಮತ್ತೊಬ್ಬರು ಮಾಡುವ ಸಾಲಕ್ಕೆ ಹೊಣೆಯಾಗಬೇಕು. ಈ ರೀತಿ ಸಾಮರ್ಥ್ಯಗಳಿಂದ ಬೇರೆಬೇರೆ ಕಾರ್ಯಗಳನ್ನು ಮಾಡಬಹುದೆಂದು ಪುಲಿಗೆರೆ ಸಾಮನಾಥನು ಹೇಳಿದ್ದಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **V.** | **ಸಂದರ್ಭಸಹಿತ ವಿವರಣೆ :** | **2 × 3 = 6** |
| | ಪದ್ಯದ ಹೆಸರು, ಕೃತಿ, ಕರ್ತೃ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | "ದೊರಕಿದಾ ಗುರು ದೊರಕಿದಾ ಸದ್ಗುರು."<br>***ಉತ್ತರ :***<br>ಈ ಮಾತನ್ನು ಆರ್.ಎಸ್. ಸುಂಕದರವರ 'ಶ್ರೀ ಶಿಶುನಾಳ ಶರೀಫ ಸಾಹೇಬರ ಅನುಭಾವ ಗೀತ ಮಂಜರಿ' ಕೃತಿಯಿಂದ ಆಯ್ದ 'ಶಿಶುನಾಳ ಶರೀಫ ಸಾಹೇಬರು' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಶರೀಫರು ಹೇಳಿದ್ದಾರೆ. ಸ್ವಜಾತಿಯನಲ್ಲದ ತಮಗೆ ಮುಕ್ತ ಹೃದಯದಿಂದ ವಿದ್ಯಾದಾನ ಮಾಡಿದ ತಮ್ಮ ಗುರುಗಳಾದ ಗೋವಿಂದಭಟ್ಟರ ಗುರುಮಹಿಮೆಯನ್ನು ಶರೀಫರು ಹಾಡಿ ಹೊಗಳುವಾಗ ಈ ಮೇಲಿನ ಮಾತು ಬಂದಿದೆ.<br>ಗುರು ಶ್ರೇಷ್ಠತೆಯು ಈ ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ. | |
| 26. | "ಭೂಮಿತಾಯ ಕುಡಿಗಳೆಂದು ಪಣವ ತೊಡಿರಿ ಇಂದೆ."<br>***ಉತ್ತರ :***<br>ಈ ವಾಕ್ಯವನ್ನು 'ಕೆ.ಎಸ್. ನಿಸಾರ್ ಅಹಮದ್' ರವರ 'ಸಮಗ್ರ ಕವಿತೆಗಳು' ಕೃತಿಯಿಂದ ಆಯ್ದ 'ಭೂತಾಯಿ ಕುಡಿಗಳು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಕವಿ ನಿಸಾರ್ ಅಹಮದ್ ಅವರು ಹೇಳಿದ್ದಾರೆ.<br>ಆಚಾರ–ವಿಚಾರ, ಉಡುಗೆ–ತೊಡುಗೆ, ರೂಢಿ ಸಂಪ್ರದಾಯಗಳಿಂದ ನಾವು, ನೀವು, ಅವರು, ಇವರು ಬೇರೆ ಬೇರೆಯಾಗಿದ್ದರೂ ನಾವೆಲ್ಲರೂ ಭೂಮಿತಾಯ ಮಕ್ಕಳೆಂದು ಪಣವನ್ನು ತೊಡಬೇಕೆಂದು ಕವಿ ತಿಳಿಸುವಾಗ ಈ ಮೇಲಿನ ಮಾತು ಬಂದಿದೆ.<br>ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ಏಕತೆಯನ್ನು ಬೆಳೆಸಿಕೊಳ್ಳಬೇಕು ಎಂಬುದು ಈ ವಾಕ್ಯದ ಸ್ವಾರಸ್ಯವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| VI. | **ಐದು-ಆರು ವಾಕ್ಯಗಳಲ್ಲಿ ಉತ್ತರಿಸುವುದು :** | **4 × 3 = 12** |
| | ವಿಷಯಕ್ಕೆ | 2 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 27. | ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳನ್ನು ಕುರಿತು ವಿವರಿಸಿ.<br>***ಉತ್ತರ :***<br>ಗಾಂಧೀಜಿಯವರು 1933 ನೇ ವರ್ಷದ ಕೊನೆಯಲ್ಲಿ ಕರ್ನಾಟಕ ಪ್ರವಾಸವನ್ನು ಕೈಗೊಂಡು ಕೊಡಗಿನಲ್ಲಿ ಎರಡು ದಿನಗಳ ಕಾಲ ತಂಗಿದ್ದರು. ಆಗ ಗಾಂಧೀಜಿಯವರ ಪರಮ ಅನುಯಾಯಿಯಾಗಿದ್ದ ಗೌರಮ್ಮನವರು ತಮ್ಮ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಉಪವಾಸ ಸತ್ಯಾಗ್ರಹ ಮಾಡಿ, ಗಾಂಧೀಜಿಯವರು ತಮ್ಮಂತಹ ಸಾಧಾರಣ ಕುಟುಂಬದವರ ಮನೆಗೂ ಬರಬೇಕೆಂದು ಹಠವನ್ನು ಹಿಡಿದರು. ಆಗ ಗಾಂಧೀಜಿಯವರು ಕೊಡಗಿನ ಕಿತ್ತಲೆ ಹಣ್ಣು ನೀಡಿ ಎಳೆ ಚೆಲುವೆಯ ಉಪವಾಸವನ್ನು ಅಂತ್ಯಗೊಳಿಸಿದರು. ಕೊಟ್ಟ ಮಾತಿನಂತೆ ಗಾಂಧೀಜಿಯವರು ಗೌರಮ್ಮನವರ ಮನೆಗೂ ಬಂದರು. ಗೌರಮ್ಮನವರು ಗಾಂಧೀಜಿಯವರ ಸ್ವಾತಂತ್ರ್ಯ ಸಂಗ್ರಾಮ ಮತ್ತು ಹರಿಜನೋದ್ಧಾರ ನಿಧಿಗೆ ತನ್ನ ಕೊರಳಿನ ಮಂಗಳಸೂತ್ರ, ಕಿವಿಯ ಓಲೆ ಮತ್ತು ಮೂಗುಬೊಟ್ಟಿನ ಹೊರತಾಗಿ ಉಳಿದೆಲ್ಲಾ ಒಡವೆಗಳನ್ನು ನೀಡಿದಾಗ ಗಾಂಧೀಜಿಯವರು ಅವಕ್ಕಾದರು. ಇವೇ ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳಾಗಿವೆ. | |
| 28. | ರಾಮಸಿಂಗ್ ಕುಟುಂಬದವರ ದೇಶಪ್ರೇಮ ಮತ್ತು ತ್ಯಾಗವನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ರಾಮಸಿಂಗ್ ಮೋಹನಪುರದ ಉತ್ಸಾಹೀ ತರುಣ. ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಲು ಸರ್ವಸಿದ್ಧತೆಯನ್ನು ನಡೆಸಿದ್ದಾನೆ. ಆ ದಿನದ ಬೆಳಗಿನ ಮೆರವಣಿಗೆಯನ್ನು ಮುನ್ನಡೆಸುವ ಅವಕಾಶ ಅವನಿಗೆ ಒದಗಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
| --- | --- | --- |
| | ಬಂದಿದೆ. ಮಗನನ್ನು ಬಲಿಕೊಡುವ ಸಾಧ್ಯತೆಯ ಅರಿವಿದ್ದರೂ ಧೈರ್ಯ ತಂದುಕೊಂಡು, ಈ ಹೋರಾಟದಲ್ಲಿ ತನ್ನ ಪತಿಗತಿಸಿದ್ದರೂ ಲೆಕ್ಕಿಸದೆ ತುಳಜಾಬಾಯಿಯು ತನ್ನ ಮಗನನ್ನು ಆಶೀರ್ವದಿಸಿ ಮೋಹನಪುರದಲ್ಲಿನ ಹೋರಾಟಕ್ಕೆ ಶುಭಕೋರಿ ಕಳುಹಿಸಿದ್ದಾಳೆ. ದೇಶಾಭಿಮಾನಿಯಾದ ರಾಮಸಿಂಗನು ಕುಲಕರ್ಣಿಯ ಆದೇಶವನ್ನು ಧಿಕ್ಕರಿಸಿ, ಅವನ ಮಾತಿಗೆ ಪ್ರತಿ ಮಾತಾಡಿ ವಿರೋಧಿಸುತ್ತಾನೆ. ಆಗ ಕುಲಕರ್ಣಿ ದರ್ಪದಿಂದ ರಾಮಸಿಂಗ್‌ನನ್ನು ಗುಂಡಿಕ್ಕಿ ಕೊಂದಾಗ ತುಳಜಾಬಾಯಿ ಅಲ್ಲಿಗೆ ಧ್ವಜದೊಂದಿಗೆ ಓಡಿ ಬರುತ್ತಾಳೆ. ಈ ನಾಡಿಗಾಗಿ ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನು ಬಲಿಕೊಟ್ಟಿರುವ ನಾನು ತನ್ನ ಪ್ರಾಣವನ್ನು ತ್ಯಜಿಸಲು ಸಿದ್ಧಳಿದ್ದೇನೆ ಎಂದು ಹೇಳುತ್ತಾ ತನ್ನ ದೇಶಾಭಿಮಾನವನ್ನು ವ್ಯಕ್ತಪಡಿಸುವಳು. | |
| 29. | ಜಾತಿ, ಮತ, ಕುಲಗಳ ಗೋಡೆಯನ್ನು ಕೆಡಹಬೇಕಾದ ಹೊಸ ತಲೆಮಾರಿನ ಉತ್ಸಾಹವನ್ನು ಕವಿ ಚಿತ್ರಿಸಿರುವ ಬಗೆಯನ್ನು ಮೆಚ್ಚುವಂಥದ್ದು ಏಕೆ ? ವಿವರಿಸಿ.<br>***ಉತ್ತರ :***<br>ನಾವೆಲ್ಲರೂ ಒಂದೆ ಎಂಬ ಭಾವನೆಯಿಂದ ಬಾಳಬೇಕಾದ ನಾವು ಜಾತಿ, ಮತ, ಕುಲಗಳೆಂಬ ಅಡ್ಡಗೋಡೆಗಳನ್ನು ನಿರ್ಮಿಸಿಕೊಂಡಿದ್ದೇವೆ. ಇದರಿಂದ ನಮ್ಮಗಳ ನಡುವೆ ಅಂತರ ಹೆಚ್ಚಾಗಿ ಭೇದಭಾವದ ಬೆಂಕಿಯಲ್ಲಿ ಬಿದ್ದು ಒದ್ದಾಡುತ್ತಿದ್ದೇವೆ. ಪ್ರಳಯಕಾಲದ ರುದ್ರರಂತೆ ಇರುವ ಯುವ ಜನತೆ ಈ ಅಡ್ಡಗೋಡೆಗಳನ್ನು ಕುಟ್ಟಿ ಕೆಡವುತ್ತಾರೆ. ಹೊಸ ಬಾಳಿಗೆ ಸರ್ವರಿಗೂ ಸಮಪಾಲು ಸಮಬಾಳು ಎಂಬ ಸಮರಸದ ಭಾವವನ್ನು ಸಾರುತ್ತಾರೆ. ಹೊಸ ಯುಗದ ಸಂಕೇತವಾಗಿರುವ ಕ್ರಾಪುತಲೆಯ ಕೇತನದ ಅಡಿಯಲ್ಲಿ ಹಳೆಯ ಕಂದಾಚಾರ, ಕಟ್ಟಳೆಗಳನ್ನು ಮೆಟ್ಟಿ ನಿಂತು ನಿರಂತರ ಹೋರಾಟಕ್ಕಾಗಿ ಒಗ್ಗೂಡುತ್ತಾರೆ. ಹಳೆಯ ಕೊಳೆಯನ್ನು ಕಳೆದು ನವೀನ ಶುಭವಾದ ಸ್ವರ್ಗವನ್ನು ಇಳೆಗೆ ತರುವ ಉತ್ಸಾಹವನ್ನು ಯುವಜನ ತೋರುತ್ತಾರೆ. ಸ್ವಚ್ಛಂದವಾದ ಹಚ್ಚಹಸುರಿನ ಹೃದಯ ಮಂದಿರದಲ್ಲಿ ಎಲ್ಲರನ್ನು ಸ್ವಾಗತಿಸುತ್ತಾ ಅಸಮಾನತೆಯನ್ನು ಬೇರು ಸಹಿತ ಕಿತ್ತು ಹಾಕುವ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕಾತುರವನ್ನು ಯುವ ಜನತೆ ತೋರುತ್ತಾರೆ. ಈ ರೀತಿ ಕವಿ ಜಾತಿ, ಮತ, ಕುಲಗಳ ಗೋಡೆಯನ್ನು ಕೆಡುಹಬೇಕಾದ ಹೊಸ ತಲೆಮಾರಿನ ಉತ್ಸಾಹವನ್ನು ಚಿತ್ರಿಸಿರುವ ಬಗೆಯನ್ನು ಮೆಚ್ಚಬಹುದಾಗಿದೆ. | |
| 30. | ಮಳೆದೇವರಲ್ಲಿ ರೈತನು ಮಾಡಿಕೊಳ್ಳುವ ಪ್ರಾರ್ಥನೆಯನ್ನು ವಿವರಿಸಿ.<br>***ಉತ್ತರ :***<br>ರೈತರಿಗೆ ಬೇಸಾಯವು ಪ್ರಧಾನ ವೃತ್ತಿ, ಮಳೆ ಬಂದು ಕೆರೆಕಟ್ಟೆಗಳಲ್ಲಿ ತುಂಬಿ, ಬೆಳೆದು ನಿಂತ ಫಸಲನ್ನು ನೋಡಿದರೆ ಅವರಿಗೆ ಸಂತೋಷ. ಒಂದು ವೇಳೆ ಮಳೆ ಬಾರದಿದ್ದರೆ ದೇವರಲ್ಲಿ ಅವರು ಬೇಡುವ ರೀತಿ ಮನಕಲಕುತ್ತದೆ. ರಕ್ಷಿಸುವವರಿಲ್ಲದೆ ಈ ಭೂಮಿ ಬರಡಾಗಿದೆ. ದನಕರುಗಳು ಆಹಾರವಿಲ್ಲದೆ ಸೊರಗಿ ಹೋಗಿವೆ. ಮಳೆರಾಯನೇ ನೀ ಬಂದು ಕಾಪಾಡು ಎಂದು ಬೇಡುತ್ತಾನೆ. ಪೂರ್ವ ದಿಕ್ಕಿನಲ್ಲಿ ಮೋಡ ಕಟ್ಟಿಕೊಂಡಿದೆ. ಮಳೆ ಬರುವ ಸೂಚನೆ ಕಾಣುತ್ತಿದೆ. ನಮ್ಮ ಮೇಲೆ ಕರುಣೆ ತೋರೆಂದು ಪ್ರಾರ್ಥಿಸುತ್ತಾರೆ. ಭೈರವ ಬೆಟ್ಟದ ಮೇಲೆ ಹೆಚ್ಚಾಗಿ ಸೋನೆಮಳೆಯನ್ನು ಸುರಿಸುವಂತೆ ಕೇಳಿಕೊಳ್ಳುತ್ತಾನೆ. ಸ್ವಾತಿಮಳೆ ಸುರಿದು ಸಾವಿರಾರು ಕೆರೆಗಳು ತುಂಬಿ ತುಳಕಬೇಕು. ಅಲ್ಲಿ ಬೆಳೆದ ಕುಚ್ಚಲು ಮೀನುಗಳನ್ನು ಹಿಡಿದು ಹೆಚ್ಚು ಲಾಭ ಗಳಿಸುವಂತೆ ಅನುಗ್ರಹ ನೀಡೆಂದು ಪಾರ್ಥನೆಯನ್ನು ಮಾಡಿಕೊಳ್ಳುತ್ತಾರೆ. ಸಮೃದ್ಧವಾಗಿ ಮಳೆಬೆಳೆಯಾಗಿ, ಎಲ್ಲರೂ ಸುಖವಾಗಿರಲಿ ಎಂಬ ಸದಾಶಯ ಅವರ ಪ್ರಾರ್ಥನೆಯಲ್ಲಿ ವ್ಯಕ್ತವಾಗಿದೆ. | |
| **VII.** | **ಕವಿಗಳ / ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **2 × 3 = 6** |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | *ಗೊರೂರು ರಾಮಸ್ವಾಮಿ ಅಯ್ಯಂಗಾರ್ :*<br>***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ೧೯೦೪ ನೇ ಜುಲೈ ೪ ರಂದು ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿಸಿದರು. ಇವರ ಕೃತಿಗಳು – 'ನಮ್ಮ ಊರಿನ ರಸಿಕರು', 'ಗರುಡಗಂಬದ ದಾಸಯ್ಯ', 'ಹೇಮಾವತಿ', 'ಮೆರವಣಿಗೆ', 'ಅಮೆರಿಕಾದಲ್ಲಿ ಗೊರೂರು', 'ಭೂತಯ್ಯನ ಮಗ ಅಯ್ಯು', 'ಹಳ್ಳಿಯ ಹಾಡು' ಇವರು ಬರೆದ ಕೃತಿಗಳು. | |
| 32. | *ಕೆ.ಎಸ್. ನಿಸಾರ್ ಅಹಮದ್ :* | |
| | ***ಉತ್ತರ :*** | |
| | ಕೆ.ಎಸ್. ನಿಸಾರ್ ಅಹಮದ್ ಅವರು ೧೯೩೬ ರ ಫೆಬ್ರವರಿ ೫ ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದರು. 'ಮನಸು ಗಾಂಧಿ ಬಜಾರು', 'ನೆನೆದವರ ಮನದಲ್ಲಿ', 'ಅನಾಮಿಕ ಆಂಗ್ಲರು', 'ಸುಮುಹೂರ್ತ', 'ಸಂಜೆ ಐದರ ಮಳೆ', 'ನವೋಲ್ಲಾಸ', 'ಸ್ವಯಂ ಸೇವೆಯ ಗಿಳಿಗಳು', 'ನಾನೆಂಬ ಪರಕೀಯ', 'ನಿತ್ಯೋತ್ಸವ', 'ಹಕ್ಕಿಗಳು' ಇವರು ಬರೆದ ಕೃತಿಗಳು. | |
| **VIII.** | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 3 = 3** |
| 33. | "ಶಕ್ತಿಗಿಂತ ಯುಕ್ತಿ ಮೇಲು."<br>**ಅಥವಾ**<br>"ಕೈ ಕೆಸರಾದರೆ ಬಾಯಿ ಮೊಸರು." | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿಗೆ / ಉದಾಹರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **IX.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **1 × 4 = 4** |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 34. | ಕೆಳದಿ ಚೆನ್ನಮ್ಮ ಯುದ್ಧವನ್ನೇ ಮಾಡದೆ ಬಲಾಢ್ಯ ಮೊಗಲರ ಸೈನ್ಯವನ್ನು ಹೇಗೆ ಸೋಲಿಸಿದಳು ? ವಿವರಿಸಿ.<br>**ಅಥವಾ**<br>ಅಬ್ಬಕ್ಕದೇವಿಯು ಸಪ್ತ ಸಮುದ್ರದಾಚೆ ವಿಖ್ಯಾತಳಾದ ಬಗೆ ಹೇಗೆ ? ವಿವರಿಸಿ.<br>***ಉತ್ತರ :***<br>ಕೆಳದಿಯ ರಾಣಿ ಚೆನ್ನಮ್ಮ ಮೊಗಲರಿಗೆ ಅಂಜಿ ತಲೆ ಮರೆಸಿಕೊಂಡು ಓಡಿ ಬಂದ ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯ ನೀಡಿದಳು. ಆಗ ಕೋಪಗೊಂಡ ಔರಂಗಜೇಬನು ತನ್ನ ಮಗ ಅಜಮತಾರನ ಜೊತೆಗೆ ಭಾರಿ ಸೈನ್ಯ ಕಳುಹಿಸಿದನು. ಆದರೆ ಚಾಣಾಕ್ಷಳಾದ ಚೆನ್ನಮ್ಮಾಜಿ ಬೆಟ್ಟಗುಟ್ಟಗಳ ಪ್ರದೇಶವಾದ ಭುವನಗಿರಿಗೆ ತನ್ನ ರಾಜಧಾನಿಯನ್ನು ಸ್ಥಳಾಂತರಿಸಿದಳು. ಸುತ್ತಮುತ್ತಲಿನ ಬೆಟ್ಟ ಕಣಿವೆ, ಇಕ್ಕಟ್ಟುದಾರಿ, ಕಳ್ಳದಾರಿಗಳಲ್ಲಿ ತನ್ನ ಸೈನಿಕರನ್ನು ನಿಲ್ಲಿಸಿ ಮೊಗಲ್ ಸೇವೆಗೆ ಅನ್ನ ನೀರು ಸಿಗದಂತೆ ಮಾಡಿದಳು. ದಟ್ಟವಾದ ಕಾಡುಗಳ ಸಂದುಗೊಂದುಗಳಲ್ಲಿ ಚಲಿಸಲು ಆಗದೆ ಮಲೆನಾಡಿನ ಮಳೆಗೆ ತತ್ತರಿಸಿ ಪ್ರಾಣಭೀತಿಯಿಂದ ಪಲಾಯನಗೈದರು ಮೊಗಲರು. ಭಯದಿಂದ ಕಕ್ಕಾಬಿಕ್ಕಿಯಾಗಿ ಓಡುವಾಗ ಹೇರಳವಾದ ಯುದ್ಧ ಸಾಮಗ್ರಿ ಬಿಟ್ಟು ಹೋದರು. ಈ ರೀತಿಯಾಗಿ ಕೆಳದಿಯ ರಾಣಿ ಚೆನ್ನಮ್ಮ ಯುದ್ಧವನ್ನೇ ಮಾಡದೆ ಬಲಾಢ್ಯ ಮೊಗಲನ್ನು ಸೋಲಿಸಿದ್ದು ಇತಿಹಾಸದಲ್ಲಿಯೇ ಅಪೂರ್ವ ಮತ್ತು ಅಮೋಘ ಸಾಧನೆಯಾಗಿದೆ.<br>**ಅಥವಾ**<br>ಪೋರ್ಚುಗೀಸರು ಭಾರೀ ನೌಕೆಯಲ್ಲಿ ಬಲಾಢ್ಯ ಪಡೆಯೊಂದಿಗೆ ಆಕ್ರಮಣಕ್ಕೆ ಸಜ್ಜಾಗಿ ಉಲ್ಲಾಳದ ಕರಾವಳಿಯಲ್ಲಿ ಲಂಗರು ಹಾಕಿದ್ದರು. ಆಗ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ರಾಣಿ ಅಬ್ಬಕ್ಕದೇವಿಯ ಮೊಗೇರು ಎಂಬ ಮೀನುಗಾರ ಸಾಹಸಿ ಸೈನಿಕರು ಕರಾಳ ರಾತ್ರಿಯಲ್ಲಿ ಸದ್ದುಗದ್ದಲವಿಲ್ಲದೆ ನೂರಾರು ಸಣ್ಣ ದೋಣಿಯಲ್ಲಿ ಪೋರ್ಚುಗೀಸರು ಬೀಡು ಬಿಟ್ಟಿದ್ದ ಕರಾವಳಿ ತೀರಕ್ಕೆ ಹೋದರು. ಸಾವಿರಾರು ತೆಂಗಿನಗರಿಯ ಉರಿಯುವ ದೀವಟಿಗೆಗಳನ್ನು ಕ್ಷಣಾರ್ಧದಲ್ಲಿ ಏಕಕಾಲಕ್ಕೆ ನೌಕೆಯ ಮೇಲೆ ಎಸೆದರು. ಧಗಧಗನೆ ಉರಿಯುವ ನೌಕೆಯಿಂದ ದಿಕ್ಕೆಟ್ಟ ಪೋರ್ಚುಗೀಸ್ ಸೈನಿಕರು ಸಾವಿನಿಂದ ಪಾರಾಗಲು ಸಮುದ್ರಕ್ಕೆ ಹಾರಿದಾಗ ಅಬ್ಬಕ್ಕದೇವಿಯ ಸೈನಿಕರ ಖಡ್ಗ, ಈಟಿಗಳಿಗೆ ಬಲಿಯಾದರು. ಈ ರೀತಿ ಅಬ್ಬಕ್ಕದೇವಿಯು ಪೋರ್ಚುಗೀಸರ ಹಡಗನ್ನು ಮುಳುಗಿಸಿ, ಮಿರಾಂಡಾ ಮತ್ತು ಡಿ. ಮೆಲ್ಲೊ ಎಂಬ ಸೇನಾಪತಿಗಳನ್ನು ಓಡಿಸಿ ಸಪ್ತ ಸಮುದ್ರದಾಚೆ ವಿಖ್ಯಾತಳಾದಳು. | |
| **X.** | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | **1 × 4 = 4** |
| 35. | ಕಂಚುಗಾರನ ..............................................<br>..............................................<br>..............................................<br>.............................. ಪೂಜೆ ಮಾಡುವುದು<br><br>**ಅಥವಾ**<br><br>ನಾನು ಎಂಬುದ ..............................................<br>..............................................<br>..............................................<br>.............................. ಕಾರ್ಯಗಳೆಲ್ಲವು<br><br>***ಉತ್ತರ :***<br>ಕಂಚುಗಾರನ ಬಿಡಾರದಂದದಿ<br>ಕಂಚು ಹಿತ್ತಾಳೆಯ ಪ್ರತಿಮೆಗಳ ನೆರಹಿ<br>ಮಿಂಚಬೇಕೆಂದು ಬಲು ಜ್ಯೋತಿಗಳನ್ನು ಹಚ್ಚಿ<br>ವಂಚನೆಯಿಂದಲಿ ಪೂಜೆ ಮಾಡುವುದು<br>**ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ನಾನು ಎಂಬುದ ಬಿಟ್ಟು ಜ್ಞಾನಿಗಳೊಡನಾಡಿ<br>ಏನಾದರು ಹರಿ ಪ್ರೇರಣೆಯೆಂದು<br>ಧ್ಯಾನಿಸಿ ಮೌನದಿ ಪುರಂದರವಿಠಲನ<br>ಕಾಣದೆ ಮಾಡಿದ ಕಾರ್ಯಗಳೆಲ್ಲವು | |
| **XI.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)** | **1 × 4 = 4** |
| 36. | ರಂಗನತಿಟ್ಟು ಪಕ್ಷಿಗಳಿಗೆ ಉತ್ತಮ ಪರಿಸರವನ್ನು ಒದಗಿಸುತ್ತದೆ. ಕಾವೇರಿ ನದಿ ಈ ಪ್ರದೇಶದಲ್ಲಿ ಆಳವಾಗಿದ್ದು, ಮಳೆಗಾಲದಲ್ಲಿ ತುಂಬಿಹರಿಯುತ್ತದೆ. ದಂಡೆಯುದ್ದಕ್ಕೂ ಹಸಿರು ಗಿಡಮರಗಳು, ಸುತ್ತಲೂ ಹೊಲಗದ್ದೆಗಳಿವೆ. ಇಲ್ಲಿ ಪಕ್ಷಿಗಳ ಆಹಾರವಾದ ಕೀಟ, ಎರೆಹುಳು, ನಳ್ಳಿ, ಸಿಂಪುಹುಳು, ಕಪ್ಪೆ, ಮೀನುಗಳು ಹೇರಳವಾಗಿ ಸಿಗುತ್ತವೆ. ನದಿ ಆಳವಾಗಿರುವ ಕಾರಣ ಜನಸಂಚಾರವೂ ವಿರಳವಾಗಿರುವುದರಿಂದ ಪಕ್ಷಿಗಳಿಗೆ ನೈಸರ್ಗಿಕ ರಕ್ಷಣೆಯಿದೆ. ಆದುದರಿಂದ ಅವು ಸಾವಿರ ಸಾವಿರ ಸಂಖ್ಯೆಯಲ್ಲಿ ಇಲ್ಲಿ ನೆರೆಯುತ್ತವೆ. ಹಲವು ಹತ್ತು ಬಗೆಯ ಬಣ್ಣದ, ಆಕಾರದ, ಗಾತ್ರದ ಪಕ್ಷಿಗಳನ್ನು ಇಲ್ಲಿ ಕಾಣಬಹುದು. ಹಿಮ ಬಿಳುಪಿನ ಬಣ್ಣದ ತೆಳ್ಳನೆಯ ಕೊರಳಿನ ಬೆಳ್ಳಕ್ಕಿಗಳು, ಬಂಗಾರ ಬಣ್ಣದ, ನಯವಾದ ನೆತ್ತಿ ಮತ್ತು ಕೊರಳುಳ್ಳ ಬೂಸಹಕ್ಕಿಗಳು ಸಣ್ಣ ದೊಡ್ಡ ಗಾತ್ರದ ಬಗೆಬಗೆಯ ಕೊಕ್ಕರೆಗಳು ಮೊದಲಾದವು ಸಾವಿರಾರು ಸಂಖ್ಯೆಯಲ್ಲಿ ದಂಡೆಯುದ್ದಕ್ಕೂ ಸೇರುತ್ತವೆ. ಪ್ರಣಯ ಕಾಲದಲ್ಲಿ ಪಕ್ಷಿಗಳು ವರ್ಣಮಯವಾದ ತುಪ್ಪಳ, ಗರಿ, ಪುಕ್ಕ, ಕೊಕ್ಕುಗಳನ್ನು ಪಡೆಯುತ್ತವೆ. ಆಗ ಅವುಗಳ ಕೂಗು, ಧ್ವನಿ ಮಧುರವಾಗಿರುತ್ತವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಎ) ರಂಗನತಿಟ್ಟು ಪ್ರದೇಶದಲ್ಲಿ ಹರಿಯುವ ನದಿ ಯಾವುದು ? | |
| | **ಉತ್ತರ :** ರಂಗತಿಟ್ಟು ಪ್ರದೇಶದಲ್ಲಿ ಹರಿಯುವ ನದಿ ಕಾವೇರಿ. | |
| | ಬಿ) ಈ ಪ್ರದೇಶದಲ್ಲಿ ಪಕ್ಷಿಗಳಿಗೆ ಆಹಾರವಾಗಿ ಏನೇನು ಹೇರಳವಾಗಿ ಸಿಗುತ್ತವೆ ? | |
| | **ಉತ್ತರ :** ಪಕ್ಷಿಗಳಿಗೆ ಆಹಾರವಾಗಿ ಕೀಟ, ಎರೆಹುಳು, ನಳ್ಳಿ, ಸಿಂಪುಹುಳು, ಕಪ್ಪೆ, ಮೀನುಗಳು ಹೇರಳವಾಗಿ ಸಿಗುತ್ತವೆ. | |
| | ಸಿ) ರಂಗನತಿಟ್ಟು ಪ್ರದೇಶದಲ್ಲಿ ಪಕ್ಷಿಗಳು ಸಾವಿರಾರು ಸಂಖ್ಯೆಯಲ್ಲಿ ನೆರೆಯಲು ಕಾರಣವೇನು ? | |
| | **ಉತ್ತರ :** ರಂಗನತಿಟ್ಟು ಪ್ರದೇಶದಲ್ಲಿ ಜನಸಂಚಾರ ವಿರಳವಾಗಿದ್ದು, ನೈಸರ್ಗಿಕ ರಕ್ಷಣೆ ಇರುವುದರಿಂದ ಪಕ್ಷಿಗಳು ಸಾವಿರಾರು ಸಂಖ್ಯೆಯಲ್ಲಿ ನೆರೆಯುತ್ತವೆ. | |
| | ಡಿ) ಪ್ರಣಯ ಕಾಲದಲ್ಲಿ ಪಕ್ಷಿಗಳು ಏನನ್ನು ಪಡೆಯುತ್ತವೆ ? | |
| | **ಉತ್ತರ :** ಪ್ರಣಯ ಕಾಲದಲ್ಲಿ ಪಕ್ಷಿಗಳು ವರ್ಣಮಯವಾದ ತುಪ್ಪಳ, ಗರಿ, ಪುಕ್ಕ, ಕೊಕ್ಕುಗಳನ್ನು ಪಡೆಯುತ್ತವೆ. | |
| **XIII.** | **ಪ್ರಬಂಧ ಬರವಣಿಗೆ :** | **1 × 4 = 4** |
| 37. | ಶಾಲಾ ಗ್ರಂಥಾಲಯ<br>**ಅಥವಾ**<br>ಭಾವೈಕ್ಯತೆ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳ ಪಾತ್ರ | |
| | ಪೀಠಿಕೆ | 1 ಅಂಕ |
| | ವಿಷಯ ಜೋಡಣೆ | 1 ಅಂಕಗಳು |
| | ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **XIV.** | **ಪತ್ರ ಲೇಖನ ಬರೆಯುವುದು :** | **1 × 5 = 5** |
| 38. | ನಿಮ್ಮನ್ನು ಮಂಗಳೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಅಂಜಲಿ' ಎಂದು ಭಾವಿಸಿಕೊಂಡು, ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಮೈಸೂರಿನಲ್ಲಿ ವಾಸವಾಗಿರುವ ತಾಯಿಯವರಿಗೆ ಒಂದು ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ಕಳಸದ ನಿವಾಸಿ 'ಮಿಥುನ್' ಎಂದು ಭಾವಿಸಿಕೊಂಡು, ನಿಮ್ಮ ಗ್ರಾಮಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡುವಂತೆ ಕೋರಿ, ಗ್ರಾಮಪಂಚಾಯತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ. | |
| | *ವೈಯಕ್ತಿಕ ಪತ್ರ :* | |
| | ಇಂದ, ವಿಳಾಸ, ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ವ್ಯಾವಹಾರಿಕ ಪತ್ರ :* | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |